# ಕಾದಂಬರಿ ಸಾಹಿತ್ಯ: ಒಂದು ಅವಲೋಕನ

**ಭೀಮಣ್ಣ ಎಚ್.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಘರಹತಾಬಾದ.

**Received: 13/09/2024 ; Acepted: 02/10/2024 ; Published: 05/11/2024**

**DOI: https://doi.org/10.5281/zenodo.14035373**

## ABSTRACT:

ಇಂಕು, ಕಾಗದ, ಸಾಕಷ್ಟು ವಿರಾಮ ಮತ್ತು ತಾಳ್ಮೆಗಳಿದ್ದರೆ ಯಾರು ಬೇಕಾದರೂ ಕಾದಂಬರಿ ಬರೆಯಬಹುದು ಎಂದು ಅಧ್ಯಯನದಿಂದ ತಿಳಿದು ಬರುತ್ತದೆ. ಕಾದಂಬರಿ ಸಾಹಿತ್ಯವನ್ನು "ಕರತಲ ರಂಗಭೂಮಿ" ಎಂದು ಹಿಂದಿನ ಕಾಲದಿಂದಲೂ ಕರೆದುಕೊಂಡು ಬರಲಾಗುತ್ತಿದೆ. ಕಾದಂಬರಿಯಲ್ಲಿ ಪಾತ್ರಗಳ ಸಂಭಾಷಣೆ, ಶೈಲಿ, ಜೀವನದ ಬಗೆಗಿನ ಒಂದು ನಿಶ್ಚಿತ ದೃಷ್ಟಿಕೋನ, ಬದುಕಿನ ಹಲವು ಸಮಸ್ಯೆಗಳು ನಿರೂಪಿಸಲ್ಪಟ್ಟಿರುತ್ತವೆ.

## KEYWORDS:

ಕಾದಂಬರಿ, ಕರತಲ ರಂಗಭೂಮಿ, ಸಾಹಿತ್ಯ ಪ್ರಕಾರ, ಹೊಸಗನ್ನಡ ಸಾಹಿತ್ಯ, ಸಮಾಜ.

ವಿಶ್ವ ಸಾಹಿತ್ಯದಲ್ಲಿ ಕಾದಂಬರಿಗೆ ಅದರದೆ ಆದ ವಿಶಿಷ್ಟ ಸ್ಥಾನವಿದ್ದು ಜನಪ್ರಿಯ ಓದಿನ ಮಾಧ್ಯಮವಾಗಿ ಪರಿಣಮಿಸಿದೆ. ಕನ್ನಡ ಸಾಹಿತ್ಯದ ಕಾಲಘಟ್ಟಗಳಲ್ಲಿ ನೋಡುವುದಾದರೆ 19ನೆಯ ಶತಮಾನದ ನಂತರದಲ್ಲಿ ಕಾದಂಬರಿ ಸಾಹಿತ್ಯಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಔದ್ಯೋಗಿಕರಣದ ಕ್ರಾಂತಿಯ ಪರಿಣಾಮದಿಂದಾಗಿ ಜನತೆಯ ತಾಳ್ಮೆ ಮತ್ತು ಬಿಡುವಿನ ಸಮಯದ ಅಭಾವದಿಂದ ಕಾದಂಬರಿ ಸಾಹಿತ್ಯ ಕೊರತೆ ಅನುಭವಿಸುತಿದೆ. ಕಾದಂಬರಿ ಸಾಹಿತ್ಯವನ್ನು ಓದುವ ಒಬ್ಬ ವ್ಯಕ್ತಿ ಕಾದಂಬರಿ ಸಾಹಿತ್ಯದ ಬದಲಾಗಿ ಕಥೆ, ಸಣ್ಣ ಕಥೆಗಳನ್ನು ಓದಲು ಪ್ರಾರಂಬಿಸಿದರು. ಹೀಗಾಗಿ ಕಾದಂಬರಿ ಸಾಹಿತ್ಯ ಕ್ರಮೇಣವಾಗಿ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳಲು ಪ್ರಾರಂಭಿಸಿತು. ಆದರೂ ಕಾದಂಬರಿ ಸಾಹಿತ್ಯವನ್ನು ನಾವು ನೋಡಿದಾಗ ಈ ಸಾಹಿತ್ಯಕ್ಕೆ ಪುರತನ ಕಾಲದಿಂದಲೂ ಮಹತ್ವ ಇರುವುದು ತಿಳಿದು ಬರುತ್ತದೆ.

ಕಾದಂಬರಿಕಾರರಲ್ಲಿ ತನ್ನ ಪರಿಸರದ ಭಾಷಾ ಪ್ರಜ್ಞೆ, ಆಡು ನುಡಿಯ ಸ್ವರೂಪ, ಮಣ್ಣಿನ ವಾಸನೆಯನ್ನು, ಅರ್ಥಗರ್ಭಿಸಿಕೊಂಡಿರುವ ಗಾದೆ, ನುಡಿಗಟ್ಟು, ಪದಗಳ

ಸ್ವರೂಪ, ಸಾಮಾಜಿಕ ಜೀವನ, ಬಂಡಾಯದ ಪ್ರಜ್ಞೆ, ಸ್ತ್ರೀ–ಪುರುಷರ ಅಂತರ, ಸಾಂಸ್ಕೃತಿಕ ನಿಷ್ಪತ್ತಿ, ಆರ್ಥಿಕ ಸ್ಥಿತಿಗತಿಗಳಿಂದ ಹಿಡಿದು ಜೀವನದ ಹಲವು ನೆಲೆಗಳನ್ನು ಹೈದರಾಬಾದ್ ಕರ್ನಾಟಕದ ಪ್ರಾದೇಶಿಕ ಕಾದಂಬರಿಗಳಲ್ಲಿ ಮೂಡಿ ಬಂದಿರುವುದು ತಿಳಿದು ಬರುತ್ತದೆ. ಕುಂ.ವೀರಭದ್ರಪ್ಪ, ಗೀತಾ ನಾಗಭೂಷಣ, ಚೆನ್ನಣ್ಣ ವಾಲಿಕರ, ಚಿತ್ರಶೇಖರ್ ಕಂಠಿ, ಶಾಂತರಸ ಇನ್ನು ಮುಂತಾದ ಮಹಾನ ಕಾದಂಬರಿಕಾರರು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿದ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಹಿಡಿದು ಜೀವನದ ಹಲವು ನೆಲೆಗಳನ್ನು ತಿಳಿಸುವಲ್ಲಿ ಕಾದಂಬರಿ ಸಾಹಿತ್ಯ ಸತ್ಯದ ಬದುಕನ್ನು ತಿಳಿಸಿಕೊಡುತ್ತದೆ. ಕಾದಂಬರಿ ಎಂಬುವುದು ಜೀವನದ ಸತ್ಯವನ್ನು ಅರಿಯಲು ಬರಹದ ಮೂಲಕ ಕವಿಗಳು ಬಳಸಿಕೊಂಡ ಸಾಹಿತ್ಯದ ಒಂದು ಮಾಧ್ಯಮ. ಕನ್ನಡ ಸಾಹಿತ್ಯದಲ್ಲಿ ಹೆಮ್ಮೆಪಡುವ ಸಂಗತಿ ಅಂದರೆ ಕಾದಂಬರಿ ಸಾಹಿತ್ಯ ಬೆಳೆದುಬಂಧ ಬಗ್ಗೆ ತಿಳಿದುಕೊಳ್ಳುವದಾಗಿದೆ. ಲೇಖಕ ಯಾವ ಪ್ರದೇಶದ ಜನಜೀವನವನ್ನು ಮತ್ತು ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡು ಕಾದಂಬರಿಯನ್ನು ಸೃಷ್ಟಿಸುವನು ಆ ಕಾದಂಬರಿಯ ಉದ್ದೇಶ ಮತ್ತು ಪರಿಣಾಮ ಪೂರ್ಣಗೊಳ್ಳುತ್ತದೆ. ಅದೇ ರೀತಿ ಒಂದು ಪ್ರದೇಶದ ಜನಜೀವನ, ಸ್ತ್ರೀ–ಪುರುಷರ ಶೋಷಣೆ ಜೊತೆಗೆ ಸಾಂಸ್ಕೃತಿಕ ವಿಭಿನ್ನತೆಗಳು ಇಂತಹ ಹಲವು ಅಂಶಗಳಿಂದ ನೋಡಿದಾಗ ಕಾದಂಬರಿ ಭಿನ್ನತೆಗೆ ಹಲವು ಕಾರಣಗಳಾಗಿರುತ್ತವೆ.

ಯಾವುದೇ ಒಂದು ಕಾದಂಬರಿಯು ಮನುಷ್ಯ ಜೀವನದ ಹಲವು ಗುಣಲಕ್ಷಣಗಳನ್ನು ಹೊಂದಿಕೊಂಡೇ ಸೃಷ್ಟಿಯಾಗಿರುವುದನ್ನು ನೋಡುತ್ತೇವೆ. ಹೈದ್ರಾಬಾದ ಕರ್ನಾಟಕದ ಕಾದಂಬರಿಗಳು ಈ ಭಾಗದ ಜನಜೀವನ ಆಡು ನುಡಿ, ಆಚರಣೆಗಳು ಸಂಪ್ರದಾಯಗಳು, ಮೇಲು ಕೀಳು, ಜೋತೆಗೆ ಶೋಷಣೆ, ಸ್ತ್ರೀ ಸಂವೇದನೆ, ನಂಬಿಕೆಗಳು, ಮಣ್ಣಿನ ವಾಸನೆ ಅದು ಅಲ್ಲದೆ ಸಾಂಸ್ಕೃತಿಕ ನೆಲೆಗಳಿಂದ ಹಿಡಿದು ಬದುಕಿನ ಚಿತ್ರಣ ಬಿಂಬಿಸುವಂಥವು. ಕಾದಂಬರಿಗಳು ನಮ್ಮ ಸಮಾಜ ಅಡ್ಡ ದಾರಿಯನ್ನು ಹಿಡಿದಂತೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿವೆ ಎಂದರೆ ಅತಿಶಯುಕ್ತಿಯಾಗಲಾರದು. ಮಾನವನ ಜೀವನದ ನೈತಿಕತೆ ಚೌಕಟ್ಟಿನಲ್ಲಿ ಆದರ್ಶಯುತವಾಗಿ ಮತ್ತು ಮೌಲ್ಯಯುತವಾಗಿ ಜೀವನ ಸಾಗುವುದರ ಮೂಲಕ ಸಮಾಜದಲ್ಲಿ ಶಾಂತಿ ನೆಮ್ಮದಿ ಸೌಹಾರ್ದತೆ ವಾತಾವರಣವನ್ನು ಕಟ್ಟಿಕೊಡುವಲ್ಲಿ ಹೈದ್ರಾಬಾದ ಕರ್ನಾಟಕದ ಕಾದಂಬರಿಗಳ ಪಾತ್ರ ಮಹತ್ವದಾಗಿದೆ. ಮಾನವ ಜೀವನದ ಹಲವು ನೆಲೆಗಳನ್ನು ಹೊಂದಿರುವಂತಹ ಕಾದಂಬರಿಗಳ ಅಧ್ಯಯನ ಮಾಡುವುದರ ಮುಖಾಂತರ ಹೈದ್ರಾಬಾದ ಕರ್ನಾಟಕ ಕಾದಂಬರಿಗಳಲ್ಲಿ ಸ್ತ್ರೀ ಶೋಷಣೆ ಹೇಗೆ ಹುದುಗಿ ಕೊಂಡು ಸಾಗಿ ಬರುತ್ತಿದೆ ಎಂಬುವುದು ಕಾದಂಬರಿ ಸಾಹಿತ್ಯ ತಿಳಿಸಿಕೊಡುತ್ತದೆ. ಗರ್ವದಿಂದ ಜೀವನ ಮಾಡಿದ ಮೇಲ್ವರ್ಗದವರ ತುಳಿತಕ್ಕೆ ನಲುಗಿ ಹೋದ

ಕೆಳವರ್ಗದವರ ಜೀವನದ ಬದುಕಿನ ನೆಲೆಗಳನ್ನು ತಿಳಿಸಿಕೊಡುವಲ್ಲಿ ಕಾದಂಬರಿ ಸಾಹಿತ್ಯ ಸಹಕಾರಿಯಾಗಿದೆ. ಮನುಷ್ಯ ಬದುಕಿನ ಹಿನ್ನೆಲೆಯಲ್ಲಿ ನೋಡಿದರೆ ಈ ಭಾಗದ ಕಾದಂಬರಿಗಳಲ್ಲಿ ಅಡಗಿದ ಸತ್ಯತೆಯನ್ನು ಹೊರಗೆಡುವುದು ಕಾದಂಬರಿ ಸಾಹಿತ್ಯದ ಅಧ್ಯಯನದ ಅವಶ್ಯಕತೆ ನಮಗಿದೆ ಎಂದು ಅನಿಸುತ್ತದೆ.

ಕನ್ನಡ ಸಾಹಿತ್ಯದಲ್ಲಿ ಕಾದಂಬರಿಗೆ ವಿಶಿಷ್ಟವಾದ ಸ್ಥಾನವಿದೆ. ಕಾದಂಬರಿ ಎಂಬುವುದು ಒಂದು ತಲೆಮಾರಿನಿಂದ ತಲೆಮಾರಿಗೆ ಜನರ ಜೀವನ ಚಿತ್ರಣವನ್ನು ತಿಳಿಸಿಕೊಡುವಂತವುದು. ಪ್ರಾದೇಶಿಕತೆ ದೃಷ್ಟಿಯಿಂದ ನೋಡಿದಾಗ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಕಾದಂಬರಿಗಳ ಅಧ್ಯಯನಗಳು ನಡೆದಿವೆ. ಕಾದಂಬರಿಕಾರರು ಕಾದಂಬರಿ ಸಾಹಿತ್ಯವನ್ನು ರಚನೆ ಮಾಡುವ ಸಂದರ್ಭದಲ್ಲಿ ತನ್ನ ಸುತ್ತಮುತ್ತಲಿನ ಚಿತ್ರಣವನ್ನು ಸತ್ಯದ ನೆಲೆಗಟ್ಟಿನಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ. ಚನ್ನಣ್ಣ ವಾಲಿಕಾರರ ಹುಲಿಗೆಮ್ಮ, ಕೋಟೆಯ ಬಾಗಿಲು, ಒಂದು ಹೆಣ್ಣಿನ ಒಳ ಜಗತ್ತು, ಬೆಳ್ಯಾ ಹಾಗೂ ಗೀತಾ ನಾಗಭೂಷಣರ ಚುಕ್ಕಿಹರೆಯದ ದಿನಗಳು, ಕಾಗೆ ಮುಟ್ಟಿತು, ಬದುಕು, ನೀಲಗಂಗಾ ಇನ್ನೂ ಹಲವಾರು ಕಾದಂಬರಿಗಳು ನಮ್ಮ ಪ್ರಾದೇಶಿಕ ಜನ –ಜೀವನ ಚಿತ್ರಣವನ್ನು ತಿಳಿಸುವಲ್ಲಿ ಕಾದಂಬರಿಕಾರರು ಹಾಕಿಕೊಟ್ಟ ನೆಲೆ ನೋಡಿದಾಗ ಕಾದಂಬರಿ ಸಾಹಿತ್ಯದ ಮಹತ್ವ ಏನು ಎಂಬುದು ಅರಿವಿಗೆ ಬರುತ್ತದೆ. ಬಡತನ ಎಂಬುದು ಮನುಷ್ಯನನ್ನು ಹೇಗೆ ಕಿತ್ತಿ ತಿನ್ನುತ್ತದೆ, ದರ್ಪದ ಗೌಡಿಕೆ ಎನುವುದು ಒಬ್ಬ ಸ್ತ್ರೀ ಬದುಕನ್ನು ಹೇಗೆ ಕಿತ್ತು ತಿನ್ನುತ್ತದೆ, ಬಡತನದಲ್ಲಿ ಹುಟ್ಟಿದ ಒಬ್ಬ ಸ್ತ್ರೀಯ ಬದುಕು ಹೇಗೆ ಹಾಳಾಗುತ್ತದೆ, ದೇವದಾಸಿ ಪದ್ಧತಿ, ಇಂಥ ಹಲವು ವಿಷಯಗಳನ್ನು ಕಣ್ಣಾರೆ ಕಂಡ ಲೇಖಕರು ತಮ್ಮ ಬರಹದ ಮೂಲಕ ಚಿತ್ರಿಸಿದ್ದಾರೆ. ಕೆಳವರ್ಗದವರಿಗೆ ಆಸೆ ಆಕಾಂಕ್ಷಗಳಿದ್ದರು ಮೇಲ್ವರ್ಗದವರ ತುಳಿತಕ್ಕೆ ಶಿಕ್ಕು ನಲುಗಿ ಹೋಗಿರುವುದು ಕಂಡು ಬರುತ್ತದೆ.

ಹೊಸಗನ್ನಡ ಸಾಹಿತ್ಯದ ಪ್ರಕಾರಗಳಾದ ಭಾವಗೀತೆ, ಸಣ್ಣ ಕಥೆ, ಪ್ರಬಂಧ, ವಿಮರ್ಶೆ ಮುಂತಾದವುಗಳಂತೆ ಕಾದಂಬರಿ ಪ್ರಕಾರ ಉಗಮಗೊಂಡಿರುವುದು ಬಲ್ಲೆವು. ವಸಾಹತುಶಾಹಿ ಆಡಳಿತದ ಫಲದಿಂದ ರೂಢಿಗೆ ತಂದ ಆಧುನಿಕ ಶಿಕ್ಷಣ ಕನ್ನಡಕ್ಕೆ ಬಹುದೊಡ್ಡ ಕೊಡುಗೆ ನೀಡಿದ್ದನ್ನು ಅಲ್ಲ ಗಳೆಯಲಾರೆವು. ಬದಲಾದ ಭಾರತೀಯರ ತತ್ಫಲವಾಗಿ ಕನ್ನಡಿಗರ ಜೀವನ ಸಂಸ್ಕೃತಿಯನ್ನು ಸಣ್ಣ ಕಥೆ ಹಾಗೂ ಕಾದಂಬರಿ ಪ್ರಕಾರಗಳು ತುಂಬಾ ಪರಿಣಾಮಕಾರಿಯಾಗಿ ಹಿಡಿದಿಟ್ಟವು. ಇಂಗ್ಲಿಷ್ ಸಾಹಿತ್ಯದ ಪ್ರಭಾವ ಪ್ರೇರಣೆಯಿಂದ ಹೊಸತನಕ್ಕೆ ಮೈ ತೆರೆದುಕೊಂಡ ಕನ್ನಡ ಕಾದಂಬರಿಯೂ ಅನೇಕ ಪ್ರಯೋಗಗಳನ್ನು ಕಾಣುವಂತಾಯಿತು. ಈ ಪ್ರಯೋಗಗಳಲ್ಲಿ ಪ್ರಾದೇಶಿಕತೆ ಎಂಬುದು ಒಂದು ವಿಷಯವಾಗಿ ಪರಿಣಮಿಸಿತು. ಹೀಗೆ ಇದ್ದರೂ ಕಾದಂಬರಿ ಸಾಹಿತ್ಯವು ಮನುಷ್ಯನ ಹಲವು ನೆಲೆಗಳನ್ನು ತಿಳಿಸುವಲ್ಲಿ ಮಹತ್ವದ ಪಾತ್ರ

ವಹಿಸಿದೆ ಎನ್ನುವುದನ್ನು ಅಲ್ಲಗಳಿಯುವಂತಿಲ್ಲ.

**ಪರಾಮರ್ಶನ ಗ್ರಂಥಗಳು:**


1. ಅಮರಚಿಂತ ಜಂಬಣ್ಣ. (1998). ಕುರುಮಯ್ಯ ಮತ್ತು ಅಂಕುಶದೊಡ್ಡಿ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
2. ಕಟ್ಟಿಮನಿ ಬಸವರಾಜ. (2006). ಜ್ವಾಲಾಮುಖಿಯ ಮೇಲೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.
3. ನಾಗಭೂಷಣ ಗೀತಾ. (1986). ನೀಲಗಂಗಾ. ಪತ್ರಿಕೆ ಪ್ರಕಾಶನ. ಬೆಂಗಳೂರು.
4. ಭೀಮಣ್ಣ ಎಚ್. (2011). ನವ ಕಾದಂಬರಿಗಳ ಅವಲೋಕನ. ಶ್ರೀ ಬಲ ಭೀಮ್ ಪ್ರಕಾಶನ. ರಾಸಣಗಿ.
5. ವಾಲಿಕಾರ್ ಚನ್ನಣ್ಣ. (2002). ಸಮಗ್ರ ಕಾದಂಬರಿ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಕಲಬುರ್ಗಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.